ಒ ಎಸ್ 88-2015

ಪಿಡಬ್ಲ್ಯೂ- 3

(ದಿನಾಂಕ 02-03-2019 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣಿಕರಿಸಲಾಯಿತು.)

**ಪಾಟೀ ಸವಾಲು ಪ್ರತಿವಾದಿ 1 ಮತ್ತು 2 ಪರ ಶ್ರೀ ಬಿ. ಪಿ. ವಕೀಲರಿಂದಃ-**

ನಾನು ಆಟೋ ಚಾಲಕ ಸಂಘದ ಅಧ್ಯಕ್ಷ ಎಂದರೆ ಮೊದಲು ಇದ್ವೆ, ಈಗ ಇದ್ದಿರುವುದಿಲ್ಲ. ನಾನು ಸಾಕಷ್ಟು ಪಂಚಾಯತಿಯನ್ನು ಮಾಡುತ್ತೇನೆ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿ 1 ಮತ್ತು 2 ರ ಪಂಚಾಯತಿಗೆ ನಾನು ಹೋಗಿರುತ್ತೇನೆ. ನಾನು ವಾದಿಗೆ ಅವರ ಜಾಗ ಸರಿ ಯಾಗಿ ಇದೆ ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಮೂಲತಃ ಹೊನ್ನೂರು ಸಾಬ್‌ಗೆ ಸೇರಿದ್ದು ನಂತರ ಹನುಮಂತಶೆಟ್ಟರು ಖರೀದಿ ಮಾಡಿರುತ್ತಾರೆ. ದಾವಾ ಆಸ್ತಿಯಲ್ಲಿ 4 ರಿಂದ 6 ಅಡಿಗಳ ಒತ್ತುವರಿ ಬಗ್ಗೆ ಹೇಳಿರುತ್ತೇನೆ. ಖರೀದಿ ದಿನಾಂಕದಿಂದ ವಾದಿ ಅದೇ ಮನೆಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ಒತ್ತುವರಿಯನ್ನು ಮೊದಲಿನಿಂದ ಹೇಳ್ತೂ ಬಂದಿರುತ್ತಾರೆ. ಪ್ರತಿವಾದಿ 1 ಮತ್ತು 2 ರವರು ಯಾವುದೇ ಒತ್ತುವರಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಅಕ್ಕ ಪಕ್ಕ ನನ್ನ ಯಾವುದೇ ಜಮೀನು ಇದ್ದಿರುವುದಿಲ್ಲ. ವಾದಿಯೊಂಗೆ ನಾನು ಚೆನ್ನಾಗಿ ಇರುವುದರಿಂದ ವಾದಿಯ ಪರ ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ನಾನು ಬೇರೇ ದಾವೆಯಲ್ಲೂ ಸಹ ಸಾಕ್ಷ್ಯ ನುಡಿದಿದ್ದೆ ಎಂದೆರ ಸರಿ.

**ಪ್ರತಿವಾದಿ 3 (ಎ) ರಿಂದ (ಇ) ವಕೀಲರಿಂದ ಪಾಟೀ ಸವಾಲು ಇಲ್ಲ.**

ಮರು ವಿಚಾರಣೆ :-ಇಲ್ಲ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ,
ಹಗರಿಬೊಮ್ಮನಹಳ್ಳಿ.